ಬಡಿಸುವ ಮುನ್ನ ಭೂತಸ್ಥಾನದ ಹೊರಬದಿಯಲ್ಲಿ ಗಣಪತಿಯನ್ನು ಅಕ್ಕಿ ತೆಂಗಿನಕಾಯಿ ಇಟ್ಟು ಸ್ತುತಿಸಿಕೊಂಡ. ಅಲ್ಲಿಂದ ನೇರ ಅಂಗಳಕ್ಕೆ ಇಳಿದು, ಸಾಂಕೇತಿಕವಾಗಿ ಭೂತವನ್ನು ಅವಾಹಿಸಲು ಬಾಳೆ ಎಲೆಯಲ್ಲಿ ಅಕ್ಕಿ ತೆಂಗಿನಕಾಯಿಗಳ ಮೇಲೆ ಹೂಗಳನ್ನ ಅಲಂಕರಿಸಿ ಗದ್ದಿಗೆಯನ್ನೇರಿಸಿದ.

ಗದ್ದಿಗೆಯಿಡುತ್ತಿದ್ದ ಕೊರಗಮೂಲ್ಯನ ನಿಧಾನ ಚಲನವಲನ ಮಾಯಿಲನಲ್ಲಿ ಅಸಮಾಧಾನ ಹೆಚ್ಚಿಸುತ್ತಿತ್ತು. ಹೊರಗಡೆ ಭೂತ ಕಾಯುತ್ತಿದೆ. 'ಇವನದೇನು ಗಂಟೆಕಟ್ಲೆ ಕೆಲ್ಸ' ಎಂದು ಮಕ್ಕಳಲ್ಲಿ ಅಸಮಾಧಾನ ಕಾರಿಕೊಂಡಾಗ ಮಕ್ಕಳು ನಕ್ಕು ಸಮಾಧಾನಗೊಳಿಸಿದರೂ ಮಾಯಿಲನಿಗೆ ಸಮಾಧಾನವಿಲ್ಲ.

ಪೂಜಾರಿ ಕೊರಗಮೂಲ್ಯ ಭೂತದ ಸ್ಥಾನದೊಳಗಿಂದ ಆವೇಶಭರಿತನಾಗಿ ಮಣಿ, ಕಟ್ಟಲೆಗಳನ್ನು ಹಿಡಿದು ಹೊರಬರಬೇಕಾದರೆ ಮಾಯಿಲನಿಗೆ ಹೊಸ ಜೀವ ಬಂದ ಅನುಭವ. ಸ್ಥಾನದೊಳಗಿಂದ ಪೂಜಾರಿ ಆವೇಶಭರಿತನಾಗಿ ಹೊರಬರುವುದನ್ನೇ ಸೇಸಪ್ಪ ದೀವಟಿಗೆ ಹಿಡಿದು ಕಾಯುತ್ತಿದ್ದ. ಇನ್ನೇನು ಕೊರಗಮೂಲ್ಯ ಹೊಸ್ತಿಲು ದಾಟಿ ಹೊರಬರಬೇಕೆನ್ನುವಷ್ಟರಲ್ಲಿ ಹೊಸ್ತಿಲಿಗೆ ಎಡವಿ ಆಯತಪ್ಪಿ ಬಿದ್ದು ಬಿಟ್ಟ.

ಕೊರಗಮೂಲ್ಯನದು ಯಾವತ್ತೂ ಅವಸರದ ಬುದ್ಧಿ. ಅದಕ್ಕೇ ಊರವರು ಆತನನ್ನು 'ಅಮಸರ ಪೂಜಾರಿ' ಎಂದು ಅಡ್ಡ ಹೆಸರಲ್ಲೇ ಕರೆಯುವುದುಂಟು. ನಿಧಾನ ಕೆಲಸವಾದರೂ, ಬುದ್ಧಿ ಅವಸರದ್ದು ನಿಜ. ಆದರೆ ಈ ರೀತಿ ಎಡವಿ ಬಿದ್ದದ್ದು ಭೂತಸಂಕುಲಕ್ಕೇ ಅವಮಾನ. ಭೂತ ಎಲ್ಲಾದರೂ ಎಡವುದುಂಟೇ. ಇದು ಭೂತದ ಸೋಲಕಳೆಯೇ... ತೀರ್ಮಾನಕ್ಕೆ ಬಂದುಬಿಟ್ಟಿದ್ದ ಮಾಯಿಲ ಬವಳಿ ಬಂದಂತಾಗಿ ಅಲ್ಲೇ ಕುಸಿದುಬಿಟ್ಟ.

ಕೂಡಿದ್ದ ನೆಂಟರಿಷ್ಟರೆಲ್ಲ ಹೆಗಲ ಮೇಲಿದ್ದ ಶಾಲುಗಳಿಂದ ಬೀಸಿ ಬೀಸಿ ಗಾಳಿ ಹಾಕಿ, ಮುಖಕ್ಕೆ ಎಳನೀರನ್ನು ಚಮುಕಿಸಿ ಆತನನ್ನು ಎದ್ದು ಕುಳ್ಳಿರಿಸುವಷ್ಟರಲ್ಲಿ ಪೂಜಾರಿಯ ಆವೇಶ ಮಿತಿಮೀರಿತ್ತು. ಆವೇಶದಿಂದ ಅಂಗಳಕ್ಕೆ ಓಡಿ ಬಂದ ಪೂಜಾರಿ ಮಾಯಿಲನ ಹೆಸರಿಡಿದು ಕೂಗಿ, ಭಯಪಡಬೇಕಾಗಿಲ್ಲ, ಎಲ್ಲವೂ ನನ್ನಿಚ್ಛೆ. ಮನೆಯ ಯಜಮಾನನಿಗೆ ಸಂಭವಿಸಬೇಕಾದ ಭಾರೀ ಅವಘಡವನ್ನು ನಾನೇ ನುಂಗಿಕೊಂಡಿದ್ದೇನೆ' ಎಂದು ಅಭಯ ನೀಡಿದಾಗ ಮಾಯಿಲನಿಗೆ ಹೋದ ಜೀವ ಮರಳಿ ಬಂದಂತೆ ದಡಕ್ಕನೆ ಎದ್ದುನಿಂತ.

ಪೂಜಾರಿಯ ಆವೇಶ ಕ್ಷಣದಿಂದ ಕ್ಷಣಕ್ಕೆ ಏರುತ್ತಿತ್ತು. ಆತ ಪಕ್ಕದಲ್ಲಿದ್ದ ಸೇಸಪ್ಪನ ಕೈಯಿಂದ ದೀವಟಿಗೆ ಎಳದುಕೊಂಡು ಎದೆಗೆ ಇಟ್ಟುಕೊಳ್ಳುವಾಗಲೆಲ್ಲಾ ಜಾತಿಯ ಹಿರಿಯರು ಅಡ್ಡ ಬಿದ್ದು ಭೂತವನ್ನು ಸಂತೈಸುತ್ತಿದ್ದರು.

ಪೂಜಾರಿ ಕೊನೆಗೂ ತನ್ನ ಕೈಯಲ್ಲಿದ್ದ ಮಣಿ, ಕಟ್ಟಳೆಗಳನ್ನು ಅಂಗಳದಲ್ಲಿ ಕಲ್ಲುರ್ಟಿಯ ರೂಪದಲ್ಲಿ ನಿಂತು ಇನ್ನೂ ಆವೇಶ ತುಂಬಿಸಿಕೊಳ್ಳದಿದ್ದ ದುಗ್ಗನ ಕೈಗೆ ಹಸ್ತಾಂತರಿಸಿದ. ಕಲ್ಲುರ್ಟಿ ಪೂಜಾರಿಯ ದೇಹದಿಂದ ದುಗ್ಗನ ದೇಹಕ್ಕೆ ಪ್ರವೇಶ ಪಡೆದಿತ್ತು. ಮಾಯಿಲ ಪೂಜಾರಿಗೆ ಎಳನೀರು ಕೊಟ್ಟು ಅಲ್ಲೇ ಇದ್ದ ಎರಡು ಕೈಗಳ ಕುರ್ಚಿಯ ಮೇಲೆ ಕುಳ್ಳಿರಿಸಿದ. ಕೂಡಲೇ ಪೂಜಾರಿ ಮೊದಲಿನಂತಾದ. ಎಡವಿದ ಕಾಲನ್ನು ನೀವಿಕೊಳ್ಳುತ್ತಾ ದುಗ್ಗನನ್ನೇ ದಿಟ್ಟಿಸಲಾರಂಭಿಸಿದ.

ದುಗ್ಗನಿಗೆ ಕಲ್ಲುರ್ಟಿ ಆವಾಹನೆಯಾದ ಕೂಡಲೇ ವಾದ್ಯದವ ತನ್ನ ನಾದವನ್ನು ತಾರಕಕ್ಕೇರಿಸಿ ಬೇರೆ ಬೇರೆ ಲಯದಲ್ಲಿ ಊದಲಾರಂಭಿಸಿದ್ದ. ಜತೆಗೆ ಮಾಚುವಿನ ಪಾಡ್ದನವೂ ಮುಂದವರಿದಿತ್ತು. ಕಾಳಮ್ಮ ಅಣ್ಣ ಶಂಭು ಕಲ್ಕುಡನನ್ನು ಹುಡುಕ ಹೊರಟು ಕಲ್ಲುರ್ಟಿಯಾದಳು... ಎಂದು ಪಾಡ್ದನದಲ್ಲಿ ವಿವರಿಸುವ ಸನ್ನಿವೇಶ. ಭೂತದ ಆರ್ಭಟ ಕ್ಷಣದಿಂದ ಕ್ಷಣಕ್ಕೆ ಹೆಚ್ಚುತ್ತಿತ್ತು.